## ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಮಂಜುನಾಥ್ ಭಂಡಾರಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **2409**

ಉತ್ತರಿಸಬೇಕಾದ ದಿನಾಂಕ : **22-03-2022**

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ವಿವಿಧ ಸಹಕಾರಿ ಸಂಘಗಳ ಸಂಖ್ಯೆ ಎಷ್ಟು;</td><td>ಉಡುಪಿ ಮತ್ತು ದಕ್ಷಿಣಕನ್ನಡ ಜಿಲ್ಲೆಯಲ್ಲಿರುವ ವಿವಿಧ ಸಹಕಾರ ಸಂಘಗಳ ಮಾಹಿತಿ ಕೆಳಕಂಡಂತಿವೆ:
<table>
<tr><th>ಕ್ರ ಸಂ</th><th>ಜಿಲ್ಲೆ</th><th>ಕಾರ್ಯನಿರತ</th><th>ಸ್ಥಗಿತ</th><th>ಸಮಾಪನೆ</th><th>ಒಟ್ಟು</th></tr>
<tr><td>1</td><td>ಉಡುಪಿ</td><td>660</td><td>2</td><td>13</td><td>675</td></tr>
<tr><td>2</td><td>ದಕ್ಷಿಣಕನ್ನಡ</td><td>820</td><td>20</td><td>25</td><td>865</td></tr>
<tr><td></td><td>ಒಟ್ಟು</td><td>1480</td><td>22</td><td>38</td><td>1540</td></tr>
</table></td></tr>
<tr><td>ಆ)</td><td>ಸಹಕಾರ ಸಂಘಗಳಲ್ಲಿ ಮಂಜೂರಾದ ಹುದ್ದೆಗಳು ಯಾವುವು; ಅವುಗಳ ನೇಮಕಾತಿಗೆ ಅನುಸರಿಸಬೇಕಾದ ಕ್ರಮಗಳು ಯಾವುವು;</td><td>ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960, ನಿಯಮ 17 ರ ಅವಕಾಶಗಳ ರೀತ್ಯ ಸಹಕಾರ ಸಂಘಗಳು ವಾರ್ಷಿಕ ಮಹಾಸಭೆಯಲ್ಲಿ ಅನುಮೋದಿತ ಆಯವ್ಯಯದ ಮಿತಿಯಲ್ಲಿ, ಸಂಘದ ಆಡಳಿತ ಮಂಡಳಿಗಳು ಕಾಲಕಾಲಕ್ಕೆ ಸಂಘದ ವ್ಯವಹಾರ ಮತ್ತು ವಾರ್ಷಿಕ ವಹಿವಾಟಿಗೆ ಅನುಗುಣವಾಗಿ ಅಗತ್ಯವಿರುವ ಸಿಬ್ಬಂದಿಗಳ ವೃಂದಬಲಗಳನ್ನು ರಚಿಸಿಕೊಳ್ಳುತ್ತವೆ.<br><br>ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960, ನಿಯಮ 17, 17 ಎ & 18 ರ ರ ಅವಕಾಶಗಳಂತೆ ಹಾಗೂ ಸಹಕಾರ ಸಂಘಗಳ ನಿಬಂಧಕರು ಕರ್ನಾಟಕ ರಾಜ್ಯ ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಆರ್‌ಸಿಎಸ್/ಆರ್‌ಎಸ್‌ಆರ್/ಎಕ್ಸ್‌ಎಂಸಿ/41/2020-21 ದಿ:16-09-2020 ರ ರೀತ್ಯಾ ನೇಮಕಾತಿ ಮಾಡಿಕೊಳ್ಳಲು ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಅಧಿಕಾರವಿರುತ್ತದೆ.</td></tr>
</table>

| | | |
|---|---|---|
| ಇ) | ಸಹಕಾರ ಸಂಘಗಳ ಸಿಬ್ಬಂದಿಗಳು ಒಂದು ಸಹಕಾರ ಸಂಘಕ್ಕೆ ರಾಜಿನಾಮೆ ನೀಡಿ ಮತ್ತೊಂದು ಸಹಕಾರಿ ಸಂಘಕ್ಕೆ ನೇಮಕಗೊಂಡಾಗ ಅವರ ಸೇವೆ ಮುಂದುವರಿಯುತ್ತದೆಯೇ; | ಒಂದು ಸಹಕಾರ ಸಂಘದ ಸಿಬ್ಬಂದಿಗಳು ಒಂದು ಸಹಕಾರ ಸಂಘಕ್ಕೆ ರಾಜೀನಾಮೆ ನೀಡಿ ಮತ್ತೊಂದು ಸಹಕಾರ ಸಂಘಕ್ಕೆ ನೇಮಕಗೊಂಡಾಗ ಸೇವೆಯನ್ನು ಮುಂದುವರೆಸಲು ಅವಕಾಶವಿರುವುದಿಲ್ಲ. |
| ಈ) | 5 ವರ್ಷ ಸೇವೆ ಸಲ್ಲಿಸಿದ ಸಹಕಾರಿ ಸಿಬ್ಬಂದಿಗೆ ದೊರೆಯುವ ಸವಲತ್ತುಗಳು ಯಾವುವು; ಪಿ.ಎಫ್ ಮತ್ತು ಗ್ರ್ಯಾಜ್ಯುಯಿಟಿ ನಿರ್ಧರಣೆಯ ಮಾನದಂಡಗಳಾವುವು? | ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ನಿಯಮಗಳು 1960, ನಿಯಮ 18 ರ ರೀತ್ಯ ಸಿಬ್ಬಂದಿಗಳ ನಿವೃತ್ತಿ, ಸ್ವಯಂ ನಿವೃತ್ತಿ, ಅನುಕಂಪದ ಆಧಾರದ ನೇಮಕಾತಿಗೆ, ಸಂಘವು ಸಿಬ್ಬಂದಿ ಸೇವಾ ನಿಯಮಗಳನ್ನು ರಚಿಸಿಕೊಳ್ಳಬೇಕಾಗುತ್ತದೆ. ಅದರಂತೆ ಸಿಬ್ಬಂದಿಗಳಿಗೆ ಸೇವಾ ಸೌಲಭ್ಯ ದೊರೆಯುತ್ತದೆ.<br><br>ಗ್ರಾಚ್ಯುಯಿಟಿ ಮತ್ತು ಪಿ.ಎಫ್ ಸೌಲಭ್ಯಗಳನ್ನು ಸಿಬ್ಬಂದಿಗಳು ಪಡೆಯಲು ಅವಕಾಶವಿದ್ದು, ಗ್ರಾಚ್ಯುಯಿಟಿ ಮತ್ತು ಪಿ.ಎಫ್ ಕಾಯ್ದೆಗಳ ಅನುಗುಣವಾಗಿ ಸಿಬ್ಬಂದಿಗಳಿಗೆ ಅನ್ವಯವಾಗುವ ಕ್ರಮವನ್ನು ಅನುಸರಿಸಲಾಗುವುದು. |

**ಸಂಖ್ಯೆ ಸಿಒ 52 ಪಿಎಂಸಿ 2022**

**(ಎಸ್. ಟಿ. ಸೋಮಶೇಖರ್)**
**ಸಹಕಾರ ಸಚಿವರು**